'ಏನಿಲ್ಲ ಸಾರ್, ತಾವು ಈ ಬಾರಿ ಗಾವು ನಿಲ್ಲಿಸಬೇಕೆಂದು ಪ್ರಯತ್ನ ಮಾಡುತ್ತಿದ್ದೀರಂತೆ. ಅದಕ್ಕೆ ಈ ಜನ ಬನ್ನಿ ಸ್ವಾಮಿ ಕೇಳಾನ. ಈ ಊರಿಗೆ ಏನಾದ್ರೂ ಆದ್ರೆ ಅಂತ ನನ್ನ ಜತೆಗೆ ಕರಕೊಂಡ್ ಬಂದ್ರು.'

'ಯಾರು ಹೇಳಿದ್ರು?'

'ಯಾರು ಹೇಳಿದ್ರು ಅನ್ನಕ್ಕಿಂತ ಆ ಮಾತು ನಿಜಾನಾ ಸಾರ್?' -ಬೇರೆಯವರೆಲ್ಲ ಸುಮ್ಮನೆ ಇದ್ರು. ಭಜಂತ್ರಿಯವರು ಮಾತಾಡಿದರು.

'ನಿಜ. ಆದ್ರೆ ಈಗಲೇ ಏನೂ ಹೇಳಕ್ಕಾಗದು. ಇದಿನ್ನೂ ಮೂರನೇ ದಿನ. ಒಂದೆರಡು ದಿನ ಕಾದು ನೋಡಬೇಕು. ಮಿನಿಸ್ಟರ್ ಆದೇಶ ಕಳಿಸ್ತೀನಿ ಅಂದಿದಾರೆ ನೋಡೋಣ.'

ನಂತರ ಗುಂಪಿನಲ್ಲಿದ್ದ ಒಬ್ಬ ಹುಡುಗ ಎದ್ದು ನಿಂತು ಜೋರಾಗಿ ಮಾತಾಡಿದ. 'ಯಾಕ್ ಸರ್ ನೋಡಬೇಕು. ನಮ್ಮ ಊರದೇವತೆ, ಮಾರಮ್ಮನ ಮಾಡಕ್ಕೆ ಯಾರ ಆದೇಶ ಅನುಮತಿ ಬೇಕು? ಹೇಳ್ರಿ.'

'ನಿಂಗ್ ಜಾತ್ರೆ ನಿಲ್ಸು ಅಂತ ಯಾರು ಹೇಳಿದ್ರು?'

ಮತ್ತೊಬ್ಬ ಮಾತಾಡಿ, 'ಮತ್ತೆ ಏನು ಪ್ಲಾನ್ ಮಾಡಿದೀರ?'

'ಈ ಕುರಿ ಕೋಣ ಎಲ್ಲ ನಿಲ್ಲಿಸಿ ಸಾಕು' ಇನ್ನೊಬ್ಬ ಮಾತಾಡಿದ.

'ಅಷ್ಟೇನಾ? ಇನ್ನ ಏನಾರ ಇದೆಯಾ?'

'ಎಂಟನೆ ದಿನ ಬೆಳಗಿನ ಜಾವ ಅಸಾದಿ ಬಾನ ತಿನ್ನುವ ಕೆಲಸ ಇದ್ಯಲ್ಲ. ಕೋಣ ತೂತ ಮಾಡಿ ಕರುಳು ಬಗೆದು ಅನ್ನ ಕಲಸಿ ಮುಕ್ಕಿಸಿ- ಹಸಿಮಾಂಸ ತಿನ್ನುವಂತೆ ಮಾಡ್ತೀರಲ್ಲ ಅದನ್ನು ನಿಲ್ಲಿಸ್ಬೇಕು' ಎಂದಾಗ ಒಂದೈವತ್ತು ಜನ ಹೋ... ಎಂದು ಕೂಗಿದರು.

ಪೊಲೀಸ್ ಒಳಗೆ ಹೋಗಿ ಫೋನ್ ಮಾಡಿದ್ರಿಂದ ಸಬ್‌ಇನ್‌ಸ್ಪೆಕ್ಟರ್ ಮುರುಳಿ ಮೋಹನ್, ಎ.ಸಿ. ಕ್ವಾರ್ಟ್ರಸ್ ಹತ್ತಿರ ಒಂದ್ಹತ್ತು ಜನ ಪೊಲೀಸರನ್ನು ಕಳಿಸಿದರು. ಪೊಲೀಸರು ಬಂದವರೇ ಜನರ ಸುತ್ತ ನಿಂತರು. ಜನ ಪೊಲೀಸರನ್ನು ಕಂಡು ಭಯ ಮಿಶ್ರಿತ ಗಾಬರಿಗೊಂಡರು. ಆದರೂ ಆವೇಶ ಹಾಗೆಯೆ ಇತ್ತು.

'ಅಲ್ಲ ಸಾರ್, ನಿಮ್ಮ ಪಾಡಿಗೆ ನಿಮ್ಮ ಕೆಲಸ ಮಾಡಿ. ನಾವು ಬಹಳ ವರ್ಷಗಳಿಂದ ಮಾಡುವ ಆಚರಣೆಗೆ ಯಾವ ಅಡ್ಡಿ ನಿಮ್ದು? ನಿಮಗೇನಾಗಬೇಕಿದೆ.'

'ನಾನು ಇಲ್ಲಿ ಉಪವಿಭಾಗಾಧಿಕಾರಿ. ನನಗೆ ಊರಿನ ಬಗ್ಗೆ ತಿಳಿದಿದೆ. ನೀವು ಮನುಷ್ಯರನ್ನಷ್ಟೇ ಅಲ್ಲ, ಪ್ರಾಣಿಗಳನ್ನು ಶೋಷಣೆ ಮಾಡುತ್ತಿದ್ದೀರಿ.'

'ಯಾರನ್ನು ಶೋಷಣೆ ಮಾಡುತ್ತಿದ್ದೇವೆ ಸಾರ್?' ಗುಂಪಿನಿಂದ ಒಂದು ದನಿ.

'ಅದೇನು ಅಸಾದಿಯನ್ನು ಕೋಣನ ಕರುಳು ಬಸಿದು ಅನ್ನ ಸೇರಿಸಿ ಸುತ್ತು ಕುಣಿಯುತ್ತ ಅದನ್ನು ಕುಪ್ಪಳಿಸುತ್ತ ತಿನ್ನು ತಿನ್ನು ಅನ್ನುವುದು, ಹೇಸಿಗೆ ಅಲ್ಲವೇ? ಇದು ಶೋಷಣೆ ಅಲ್ಲವೆ? ಯಾಕೆ ಬೇಕು ಇದೆಲ್ಲ?'

'ಸಾರ್, ಅದನ್ನ ಶೋಷಣೆ ಅಂತ ಯಾಕನ್ನೋತೀರ. ಅವನು ಬಹಳ ದಿನದಿಂದ ತಿನ್ನಕ್ಕೆ ಕಾತರನಾಗಿರುತ್ತಾನೆ. ಅದು ಅವನಿಗೆ ರುಚಿಯಾಗಿರಬಹುದು. ಯಾಕೆ ನಿಮ್ಮ ನೇರಕ್ಕೆ ಯೋಚ್ನೆ ಮಾಡ್ತೀರ?'

'ಹಸಿಮಾಂಸ ತಿನ್ನುವುದು ಆರೋಗ್ಯನಾ? ರುಚಿನಾ? ಏನು ಕುರುಡರಂತೆ ಮಾತಾಡ್ತೀರ?' ಅಂದ ಸುಜನ್ ಸಿಟ್ಟನಿಂದ ಕೂತ ನಂತರ ಸರಪಂಚರಲ್ಲೊಬ್ಬರಾದ ಮುನಿಯಪ್ಪ ಎದ್ದು ನಿಂತರು.

'ಸ್ವಾಮಿ, ಇದೇನು ನಿಮ್ಮ ಕಟ್ಟಳೆ. ಬಿಟ್ಬುಬಿಡಿ ನಮ್ಮನ್ನು. ನೂರಾರು ವರ್ಷಗಳಿಂದ ನಡೆದು ಬಂದ ಸಂಪ್ರದಾಯ. ಈಗ ಬಿಡುವುದಕ್ಕೆ ಸಾಧ್ಯನ? ಜನ ಎದುರು ಬೀಳ್ತಾರೆ. ಗಲಾಟೆ ಆಗದ ಹಾಗೆ ನಡೆದುಕೊಳ್ಳೋದು ನಮ್ಮ ಧರ್ಮ. ಇನ್ನು ಹೀಗೇ ಮುಂದುವರೆದರೆ ಕಷ್ಟಕ್ಕಿಟ್ಟುಕೊಳ್ಳತ್ತೆ'

'ಊರ ಮುಂದೆ ಗಾವು ಸಿಗಿಯುವುದು ಮಾರಮ್ಮನಿಗೆ ಶಾಂತಿ ಮಾಡಲಿಕ್ಕೆ. ಈಗಾಗಲೇ ಎಲ್ಲ ತಯಾರಿ ನಡೆದಿದೆ. ಮಧ್ಯದಲ್ಲಿ ಹುಳಿ ಹಿಂಡೊ ಕೆಲಸ ಬೇಡ' ಎಂದಾಗ ಎ.ಸಿ. ಸಾಹೇಬ್ರು ಸಿಡಿಮಿಡಿಗೊಂಡರು.

'ನೋಡಿ, ನಾನು ಸರ್ಕಾರದ ಆದೇಶದ ಪಾಲಕ. ಮಿನಿಸ್ಟರ್ ಏನು ಆದೇಶ ಕಳಿಸಿಕೊಡ್ತಾರೋ ಅದನ್ನು ಪಾಲಿಸೋದಷ್ಟೇ ನನ್ನ ಕರ್ತವ್ಯ.'

'ಸರ್ಕಾರ ನೀವು ಹೇಳಿದ ಹಾಗೆ ಮಾಡತ್ತೆ. ನೋಡಾಣ ನಮಗೂ ಸರ್ಕಾರದ ತಂತ್ರಗಳು ಗೊತ್ತಿವೆ. ನಾವು ಮಾಡೇ ಮಾಡ್ತೇವೆ. ಜೈಲಿಗೆ ಹೋದ್ರೂ ಸರಿ ಮಾರಮ್ಮನ ಸೇವೆ ಮಾಡೇ ತೀರ್ತೇವೆ.'

'ಆಯ್ತು ಮಾಡಿ. ಹಾಗಿದ್ರೆ ಇಲ್ಲಿ ಯಾಕ್ ಬಂದದ್ದು. ನನ್ನ ಮಾತಿಗೆ ಗೌರವ ಇಲ್ಲದ ಮೇಲೆ ಮಾತು ಬೆಳೆಸಿ ಪ್ರಯೋಜನವಿಲ್ಲ. ತೆರೆದ ಊರಿನ ಮಧ್ಯೆ ಒಂದು ಪ್ರಾಣಿಯನ್ನು ಹಿಡಿದು ಕೊಂದು ತಿನ್ನುವುದು ಹಿಂಸೆ